3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.270/2019**

ಪ್ರಾಸಾ 1

ಚಾಸಾ 1

| | |
|---|---|
| ಹೆಸರು | ರಾಜಾನಾಯಕ |
| ತಂದೆಯ ಹೆಸರು | ಲೇಟ್ ಭೀಮಾನಾಯಕ |
| ವಯಸ್ಸು | 60 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಕಡದಿನಕೆರೆ |

ಸಾಕ್ಷಿಯನ್ನು ದಿನಾಂಕ 25.02.2025 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಈ ಮೊದಲು ನಾನು ನೋಡಿರುವುದಿಲ್ಲ. ನಾನು ಪರಿಶಿಷ್ಟ ಜಾತಿಯ ಲಂಬಾಣಿ ಜನಾಂಗಕ್ಕೆ ಸೇರಿರುತ್ತೇನೆ. ಪೋ.ಠಾಣೆಗೆ ದೂರನ್ನು ಕೊಟ್ಟ ನಂತರ ಆರೋಪಿಯು ಲಿಂಗಾಯಿತ ಜನಾಂಗಕ್ಕೆ ಸೇರಿರುತ್ತಾರೆಂದು ಬೇರೆಯವರ ಮುಖಾಂತರ ನನಗೆ ಗೊತ್ತಾಗಿರುತ್ತದೆ. ಜಯಮ್ಮರವರು ನನ್ನ ನಾದಿನಿ. ಅವರನ್ನು ತಾರೀಕಟ್ಟೆತಾಂಡ್ಯಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಅವರ ಗಂಡನ ಹೆಸರು ನಾಗರಾಜನಾಯಕ. ಜಯಮ್ಮ ಮತ್ತು ಅವರ ಗಂಡ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದು ಅವರ ತೋಟ ಮತ್ತು ಜಮೀನನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ನನ್ನದು ಮಹೇಂದ್ರ ಟ್ರಾಕ್ಟರ್ ಇರುತ್ತದೆ. ಅದರ ನಂಬರ್ ಹೇಳಲು ಆಗುವುದಿಲ್ಲ.

2) ಸುಮಾರು 2 - 3 ವರ್ಷಗಳ ಹಿಂದೆ ಹೊಸದುರ್ಗದಿಂದ ತಾರೀಕಟ್ಟೆತಾಂಡ್ಯಕ್ಕೆ ಟ್ರಾಕ್ಟರ್ ನಲ್ಲಿ ಬರುತ್ತಿದ್ದಾಗ ಟ್ರಾಕ್ಟರ್ ನ್ನು ನಾನು ಚಾಲನೆ ಮಾಡುತ್ತಿದ್ದೆ. ಟ್ರಾಕ್ಟರ್ ನಲ್ಲಿ ನೇಗಿಲು, ಕುಂಟೆ, ಹಾರೆ, ಗುದ್ದಲಿ, ರಾಗಿ, ಅಕ್ಕಿ, ಅಡಿಗೆ ಪದಾರ್ಥಗಳನ್ನು ಹಾಕಿಕೊಂಡು ನನ್ನ ನಾದಿನಿ ಮನೆಗೆ ಹೋಗುತ್ತಿದ್ದೆ. ಅವಳಗೆರೆ ಗ್ರಾಮದ ಹತ್ತಿರ ರಸ್ತೆಯನ್ನು ಕಿತ್ತಿದ್ದರಿಂದ ಕೆರೆಯ ಒಳಗಿಂದ ಜಯಮ್ಮರವರ ಮನೆಯ ಹತ್ತಿರ ಬಂದಿರುತ್ತೇನೆ. ಆಗ ರಾತ್ರಿ 7.30 ಗಂಟೆ ಆಗಿತ್ತು. ನಾನು ಟ್ರಾಕ್ಟರ್ ನ್ನು ನಿಲ್ಲಿಸಿ ಮನೆಯ ಬೀಗ ತೆಗೆಯಲು ಹೋಗುತ್ತಿದ್ದಾಗ ಕಾರಿನಲ್ಲಿ ಬಂದ ನಾಲ್ಕು ಜನರು ಅಡಿಕೆ ದಬ್ಬೆಯನ್ನು ತೆಗೆದುಕೊಂಡು ನನ್ನ ಎಡಗಾಲಿಗೆ , ಸೊಂಟಕ್ಕೆ ಹೊಡೆದಿರುತ್ತಾರೆ. ನಂತರ ನನ್ನನ್ನು ಹೂವಿನಗಿಡಕ್ಕೆ ಎತ್ತಿ ಬಿಸಾಕಿರುತ್ತಾರೆ. ನಂತರ ಅವರು ನನ್ನ ಹತ್ತಿರ ಟ್ರಾಕ್ಟರ್ ನ ಬೀಗ ಕಿತ್ತುಕೊಂಡು ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗಿರುತ್ತಾರೆ. ಕಾರಿನಲ್ಲಿ ಬಂದ 4 ಜನರಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿಯೂ ಸಹ ಇದ್ದ.

3) ನಾನು ಕಿರುಚಿಕೊಳ್ಳುತ್ತಿದ್ದಾಗ ಚಾಸಾ.4 ರವರು ಬಂದು ತೊಟ್ಟಿಯಿಂದ ನೀರನ್ನು ತೆಗೆದು ನನಗೆ ಕುಡಿಸಿರುತ್ತಾರೆ. ನಾನು ಘಟನೆಯ ಬಗ್ಗೆ ಅವರಿಗೆ ವಿವರಿಸಿರುತ್ತೇನೆ. ನಂತರ ಅವರು ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಕಾರನ್ನು ಮತ್ತು ಟ್ರಾಕ್ಟರ್ ನ್ನು ಹಿಂಬಾಲಿಸಿ ಕಾರಿಗೆ ದ್ವಿಚಕ್ರ ವಾಹನವನ್ನು ಅಡ್ಡಹಾಕಿ ಯಾರು ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗುತ್ತಿದ್ದಾರೆಂದು ನೋಡಿಕೊಂಡು ವಾಪಸ್ ಬಂದಿರುತ್ತಾರೆ. ನಂತರ ನನ್ನನ್ನು ಸಾಲಕಟ್ಟೆತಾಂಡ್ಯದಲ್ಲಿರುವ ನನ್ನ ನಾದಿನಿ ಲಕ್ಷ್ಮಕ್ಕ ರವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ನನ್ನನ್ನು ಇಟ್ಟುಕೊಂಡು ನನ್ನ ಅಣ್ಣ ಮತ್ತು ನನ್ನ ಮಕ್ಕಳು ಬಂದ ನಂತರ ಚಿಕ್ಕನಾಯಕನಹಳ್ಳಿಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ.

4) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಅದು ಫಿರ್ಯಾದು ಆಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಮಾಡಿರುತ್ತೇನೆಂದು ಗೊತ್ತಾಗುವುದಿಲ್ಲ. ಗಲಾಟೆಯ ಸಂದರ್ಭದಲ್ಲಿ ನನ್ನೊಂದಿಗೆ ಬೇರೆ ಯಾರೂ ಇರಲಿಲ್ಲ. ನನಗೆ ಆರೋಪಿ ಮತ್ತು ಅವರೊಂದಿಗೆ ಬಂದಿದ್ದ ಇತರೆ ಮೂರು ಜನ ಹೊಡೆದಿರುತ್ತಾರೆ. ಅವರ್ಯಾರು ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಿಂದ ನಾನು ಬಿಡುಗಡೆ ಆದ ನಂತರ ನನ್ನನ್ನು ಯಾರೂ ಕರೆಸಿರುವುದಿಲ್ಲ.

5) ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಕಬ್ಬಿಣದ ಹಾರೆಯನ್ನು ಗುರುತಿಸುತ್ತೇನೆ. ಅದನ್ನು ನಾನು ಟ್ರಾಕ್ಟರ್ ನಲ್ಲಿ ಹಾಕಿಕೊಂಡು ಹೋಗುತ್ತಿದ್ದೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಅಡಿಕೆ ದಬ್ಬೆಯನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಜಾಲಿ ಕೋಲಿನಿಂದ ಆರೋಪಿಯು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಅದನ್ನು ಮು.ಮಾ.3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಭಾವಚಿತ್ರಗಳಲ್ಲಿ ಕಾಣುವ ಟ್ರಾಕ್ಟರ್ ನ್ನು ಗುರುತಿಸುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿರುವ ದೂರಿಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದ:**

6) ಘಟನೆಯು ದಿನಾಂಕ 02.06.2019 ರಂದು ಆಗಿರುತ್ತದೆ ಎಂದರೆ ಸರಿ. ನನ್ನ ಟ್ರಾಕ್ಟರ್ ನ ಸಂ. ಕೆಎ.37.ಟಿಎ.1104 ಎಂದರೆ ಸರಿ. ಆರೋಪಿಯು ಜಯಮ್ಮರವರ ಮನೆಯ ಬಳಿ ಬಂದ ನಂತರ ನನಗೆ ಲಂಬಾಣಿ ಸೂಳೇ ಮಗನೇ ಎಂದು ಬೈದಿರುತ್ತಾನೆ ಎಂದರೆ ಸರಿ. ನನ್ನನ್ನು ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿ. ನನ್ನ ಕಾರಿಗೆ ಏಕೆ ಡಿಕ್ಕಿ ಹೊಡೆಸಿಕೊಂಡು ಬಂದಿದ್ದೀಯಾ ಎಂದು ಬೈದಿರುತ್ತಾನೆ ಎಂದರೆ ಸರಿ. ನನ್ನ ಎಡಕಾಲಿನ ತೊಡೆ ಮತ್ತು ಮೊಣಕಾಲಿಗೆ ಏಟಾಗಿತ್ತು ಎಂದರೆ ಸರಿ. ನನ್ನ ಬೆನ್ನಿನ ಮೇಲೆ ಅಡಿಕೆ ದಬ್ಬೆಯಿಂದ ಹೊಡೆದಿರುತ್ತಾನೆ ಎಂದರೆ ಸರಿ.

7) ನಾನು ಆಸ್ಪತ್ರೆಗೆ ದಾಖಲಾದ ನಂತರ ಪೊಲೀಸರು ಬಂದು ಘಟನೆಯ ಬಗ್ಗೆ ವಿವರಗಳನ್ನು ಪಡೆದುಕೂಂಡಿರುತ್ತಾರೆ ಎಂದರೆ ಸರಿ. ಅಗ ನಾನು ದೂರನ್ನು ನೀಡಿದ್ದೇನೆ ಎಂದರೆ ಸರಿ. ನಂತರ ನನ್ನನ್ನು ಡಿವೈಎಸ್‌ಪಿ ರವರ ಕಚೇರಿಗೆ ಕರೆಸಿದ್ದರು ಎಂದರೆ ಸರಿ. ಅರುಣ್ ಕುಮಾರ್ ರವರು ಊರಿಗೆ ಬರುತ್ತೇನೆಂದು ಹೇಳಿದ್ದರಿಂದ ನಾನು ಜಯಮ್ಮನ ಮನೆಗೆ ಹೋಗಿದ್ದೆ ಎಂದರೆ ಸರಿ. ಅರುಣ್ ಕುಮಾರ್ ರವರು ಊಟ ತಂದಿದ್ದು , ಊಟ ಮಾಡಿದ ನಂತರ ಮನೆಯಲ್ಲಿ ಮಾತನಾಡುತ್ತಾ ಮಲಗಿಕೊಂಡಿದ್ದೆವು ಎಂದರೆ ಸರಿ. ಆಗ ನಮ್ಮ ಮನೆಯ ಹತ್ತಿರ ಯಾರೋ ಕೂಗಿದ ಶಬ್ದ ಕೇಳಿಸಿಕೊಂಡು ನಾನು ಮತ್ತು ಅರುಣ್ ಕುಮಾರ್ ರವರು ಮನೆಯಿಂದ ಹೊರಗೆ ಬಂದು ನೋಡಿದೆವು ಎಂದರೆ ಸರಿ. ಆರೋಪಿಯು ಮು.ಮಾ.3 ರಿಂದ ನನ್ನ ಸೊಂಟಕ್ಕೆ ಮತ್ತು ಕಾಲಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಅರುಣ್ ಕುಮಾರ್ ರವರು ಗಲಾಟೆಯನ್ನು ಬಿಡಿಸಿಕೊಂಡು ಮು.ಮಾ.2 ಮತ್ತು 3 ನ್ನು ಕಿತ್ತುಕೊಂಡರು ಎಂದರೆ ಸರಿ. ಆ ಸಮಯದಲ್ಲಿ ಮಂಜು ಮತ್ತು ಈಶ್ವರಮೂರ್ತಿ ರವರು ಸ್ಥಳಕ್ಕೆ ಬಂದು ಗಲಾಟೆಯನ್ನು ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅಪಘಾತವಾಗಿರುತ್ತದೆ ಎಂದು ಆರೋಪಿ ನನ್ನನ್ನು ಹಿಂಬಾಲಿಸಿಕೊಂಡು ಬಂದಿದ್ದು ಅಪಘಾತವಾಗಿರುವ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ

ಸರಿ. ಆದರೂ ಸಹ ಆರೋಪಿಯ ಕಾರಿಗೆ ಆಗಿರುವ ಜಖಂಗಳಿಗೆ ಸಂಬಂಧಿಸಿದಂತೆ ನಾವು ರಿಪೇರಿ ಮಾಡಿಸಿಕೊಟ್ಟಿರುತ್ತೇವೆ ಎಂದರೆ ಸರಿ. ಅಲ್ಲಿಯವರೆಗೆ ಆರೋಪಿಯ ಮನೆಯ ಹತ್ತಿರ ನನ್ನ ಟ್ರಾಕ್ಟರ್ ಇತ್ತು ಎಂದರೆ ಸರಿ. ಆರೋಪಿಯೊಂದಿಗೆ ಬಂದಿದ್ದ ಇತರೆ ಮೂರು ಜನ ಯಾವುದೇ ಗಲಾಟೆ ಮಾಡಿರುವುದಿಲ್ಲ , ಅವರು ದಾರಿಹೋಕರು ಮತ್ತುಯಾವ ಊರಿನವರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ.4 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎನ್.ಬಿ. ವಕೀಲರಿಂದ :**

(ಪಾಟೀಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ

ಸಾಕ್ಷಿಯನ್ನು ದಿನಾಂಕ 12.01.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎನ್.ಬಿ. ವಕೀಲರಿಂದ :**

8) ದಿನಾಂಕ 02.06.2019 ರಂದು ನಾನು ಚಿಕ್ಕನಾಯಕನಹಳ್ಳಿ-ಹುಳಿಯಾರು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ ಅಂಕನಬಾವಿಯ ಹತ್ತಿರ ನನ್ನ ಟ್ರಾಕ್ಟರ್ ಮತ್ತು ಶಾಂತಕುಮಾರ್ ರವರಿಗೆ ಸೇರಿದ ಕಾರಿಗೆ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ಟ್ರಾಕ್ಟರ್ ಮತ್ತು ಕಾರನ್ನು ಹಂದನಕೆರೆ ಪೋಲೀಸ್ ಠಾಣೆಯ ಹತ್ತಿರ ತಂದು ನಿಲ್ಲಿಸಿರುತ್ತಾರೆ ಎಂದರೆ ಸರಿ. ಆಗ ನನಗೆ ಗಾಬರಿಯಾಗಿ ಚಾಸಾ.2 ರವರಿಗೆ ಕರೆ ಮಾಡಿದ್ದು ಅವರು ಪೋಲೀಸ್ ಠಾಣೆಯ ಹತ್ತಿರ ಬಂದಿರುತ್ತಾರೆ ಎಂದರೆ ಸರಿ. ಆಗ ನಾನು ಅವರಿಗೆ ಅಪಘಾತವಾಗಿರುತ್ತದೆ , ಟ್ರಾಕ್ಟರ್ ಗೆ ವಿಮೆ ಇರುವುದಿಲ್ಲ ಎಂದು ತಿಳಿಸಿದ್ದರಿಂದ ಮಾರನೇ ದಿನ ಅವರು ದೂರನ್ನು ಟೈಪ್ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ದೂರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಶಾಂತಕುಮಾರ್ ರವರು ಪರಿಹಾರಕ್ಕಾಗಿ ಕೇಸನ್ನು ಹಾಕುತ್ತಾರೆಂದು ನಿಪಿ.1 ರಂತೆ ದೂರನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಆರೋಪಿಯನ್ನು ನ್ಯಾಯಾಲಯಕ್ಕೆ ಬಂದ ನಂತರ ಮೊದಲನೇ ಬಾರಿ ನೋಡಿರುತ್ತೇನೆ ಮತ್ತು ಅದಕ್ಕಿಂತ ಮುಂಚೆ ನೋಡಿಲ್ಲ ಎಂದರೆ ಸರಿ.

9) ನಾನು ದೂರಿನಲ್ಲಿ ಮತ್ತು ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ತಾರೀಕಟ್ಟೆಯ ಹತ್ತಿರ ಯಾವುದೇ ಗಲಾಟೆ ಆಗಿರುವುದಿಲ್ಲ ಎಂದರೆ ಸರಿ. ಪೋಲೀಸ್ ಠಾಣೆಯ ಆವರಣದಲ್ಲಿ ನಿಲ್ಲಿಸಿದ್ದ ಟ್ರಾಕ್ಟರ್ ನಲ್ಲಿ ರಾಗಿ, ಅಕ್ಕಿ, ಕಲ್ಟಿವೇಟರ್, ಹೆಗ್ಗುಂಟೆ ಮತ್ತು ಇತರೆ ಎಲ್ಲಾ ವಸ್ತುಗಳು ಅದರಲ್ಲಿಯೇ ಇದ್ದವು ಎಂದರೆ ಸರಿ. ಶಾಂತಕುಮಾರ್ ರವರು ನೀಡಿರುವ ದೂರಿನ ಆಧಾರದ ಮೇರಗೆ ನನ್ನ ವಿರುದ್ದ ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಿಂದ ತಪ್ಪಿಸಿಕೊಳ್ಳಲು ಚಾಸಾ.2 ರವರು ಬರೆದುಕೊಟ್ಟಿರುವ ದೂರನ್ನು

ನೀಡಿರುತ್ತೇನೆ ಎಂದರೆ ಸರಿ. ಚಾಸಾ.2 ರವರು ಯಾವ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿಕೊಟ್ಟಿದ್ದರಿಂದ ಅದೇ ರೀತಿ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

10) ನಾನು ಪೊಲೀಸರ ಮುಂದೆ ನೀಡಿರುವ ಹೇಳಿಕೆಯನ್ನು ಆಡಿಯೋ ವೀಡಿಯೋ ಚಿತ್ರೀಕರಣ ಮಾಡಿಕೊಂಡಿರುತ್ತಾರೆ ಎಂದರೆ ಇರಬಹುದು. ಆಗ ನಾನು ಕಳೆದ ಬಾರಿ ನ್ಯಾಯಾಲಯಕ್ಕೆ ಬಂದಾಗ ಹೇಳಿರುವ ಎಲ್ಲಾ ವಿಚಾರಗಳನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ ಎಂದರೆ ಸಾಕ್ಷಿಯು ಏಳು ವರ್ಷಗಳಾಗಿರುವುದರಿಂದ ನನಗೆ ಏನೂ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

(ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯ ಹೇಳಿಕೆಗಳು ಇರುವ ಸಿಡಿಯನ್ನು ಪ್ಲೇ ಮಾಡುವಂತೆ ಕೇಳಿಕೊಂಡಿದ್ದರಿಂದ ಕಡತದಲ್ಲಿ ಲಭ್ಯವಿರುವ ಡಿವಿಡಿಯನ್ನು ಡಿವಿಡಿ ಡ್ರೈವ್ ನಲ್ಲಿ ಹಾಕಿದಾಗ ರೀಡ್ ಆಗಿರುವುದಿಲ್ಲ)

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳಿಗೆ ವಿರುದ್ದವಾಗಿ ಪಾಟೀಸವಾಲಿನಲ್ಲಿ ಪ್ರಶ್ನೆಗಳಿಗೆ ಉತ್ತರಿಸಿರುವುದರಿಂದ ಪಾಟೀಸವಾಲಿಗೆ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

11) ಹಿಂದಿನ ಬಾರಿ ಮುಖ್ಯವಿಚಾರಣೆಯಲ್ಲಿ ನಾನು ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರಿಸಿರುತ್ತೇನೆ ಎಂದರೆ ಸರಿ. ಆರೋಪಿಗೆ ಸಹಾಯ ಮಾಡುವ ಉದೇಶದಿಂದ ಮುಖ್ಯ ವಿಚಾರಣೆಯಲ್ಲಿ ಮತ್ತು ಮಾನ್ಯ ಸರ್ಕಾರಿ ಅಭಿಯೋಜಕರು ಮಾಡಿರುವ ಪಾಟೀಸವಾಲಿನಲ್ಲಿರುವ ಉತ್ತರಗಳಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ

ಸಾಕ್ಷಿಯು ನ್ಯಾಯಾಲಯಕ್ಕೆ ಬರಲು ಬೆಳಿಗ್ಗೆ 3 ಗಂಟೆಗೆ ಎದ್ದು ಸುಮಾರು 10 ಕಿ.ಮೀಟರ್ ದೂರ ನಡೆದುಕೊಂಡು ಬಂದು ಬಸ್ ನಲ್ಲಿ ಬರಬೇಕಾಗಿರುವುದರಿಂದ ನನಗೆ ತೊಂದರೆ ಆಗುತ್ತಿದೆ ಎಂದು ನುಡಿಯುತ್ತಾರೆ. ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ